೧೪೧೬ (೨೦೫೨) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಸವಣೂರು ತಾಲ್ಲೂಕು ಕಳಸೂರು ಗ್ರಾಮದ ರೈತರು ವರದಾ ನದಿಗೆ ಬಂದಾರ ಬ್ರಿಡ್ಜ್ ಕಟ್ಟುವಂತೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು ನಿಜವೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? ಈ ಬಗ್ಗೆ ಯೋಜನಾ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ನಿಜ.

ಆ) ಈ ಕಾಮಗಾರಿಯ ಪೂರ್ವಭಾವಿ ತನಿಖಾ ವರದಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವೆಂದು ಕಂಡು ಬಂದಲ್ಲಿ ವಿವರವಾದ ನಕ್ಷೆ ಮತ್ತು ಅಂದಾಜನ್ನು ತಯಾರಿಸಿ ೧೯೨೨-೨೩ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಗುಬ್ಬಿ ತಾಲ್ಲೂಕು ಗಳಿಗಿ ಕೆರೆಗ್ರಾಮದ ಹತ್ತಿರ ಸನ್ನಿಹಳ್ಳಿ ಕೆರೆ ನಿರ್ಮಾಣ

೧೪೧೯ (೨೦೫೪) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಗಳಿಗಿ ಕೆರೆ ಗ್ರಾಮದ ಹತ್ತಿರ ಸನ್ನಿಹಳ್ಳಿ ಕೆರೆ ನಿರ್ಮಾಣವು ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ ಮಂಜೂರಾಗಿದ್ದು ಇಲ್ಲಿಯವರೆಗೂ ಕಾಮಗಾರಿಯನ್ನು ತೆಗೆದುಕೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಿಂಗದಹಳ್ಳಿ ಕೆರೆಯಿಂದ ಬರುವ ಬಯಲಿನಲ್ಲಿ ಸಾಕಷ್ಟು ನೀರಿಲ್ಲದೆ ಅಚ್ಚುಕಟ್ಟಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸನ್ನಿಹಳ್ಳಿ ಕಾಮಗಾರಿಯನ್ನು ಪೂರ್ಣಗೊಳಿಸಿದಲ್ಲಿ ಸಿಂಗಚ ಹಳ್ಳಿ ಬಯಲಿಗೂ ನಿರುದ್ಯೋಗಿ ರೈತರಿಗೆ ಸಹಾಯ ಆಗುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಸದರಿ ಕೆರೆಯ (ಸನ್ನಿಹಳ್ಳಿ) ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು.

ಆ) ಹೌದು.

ಇ) ಹೌದು.

ಈ) ಸನ್ನಿಹಳ್ಳಿ ಕೆರೆಯ ಕಾಮಗಾರಿಯನ್ನು ತುಮಕೂರು ಜಿಲ್ಲಾ ಪರಿಷತ್ತಿನ ೧೯೯೨-೯೩ನೇ ಸಾಲಿನ ಸಣ್ಣ ನೀರಾವರಿ ಕರಡು ಆಯವ್ಯಯ ಪಟ್ಟಿಯ ಅನುಬಂಧ 'ಇ' ನಲ್ಲಿ ಸೇರಿಸಲಾಗಿದೆ. ಇದಕ್ಕೆ ಅನುಮೋದನೆ ದೊರೆತರೆ ಈ ಕೆರೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಹಾಗೂ ತದನಂತರ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರದ ಹಣ

೧೪೨೩. (೨೧೫೨) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರವು ಹಣ ಪೆಚ್ಚ ಮಾಡಿದೆಯೇ?

ಆ) ಹೌದಾದಲ್ಲಿ ಈವರೆಗೆ ವೆಚ್ಚಮಾಡಿರುವ ಮೊಬಲಗು ಎಷ್ಟು?

ಇ) ಸಿಬ್ಬಂದಿ ವ್ಯವಸ್ಥೆ ಏನು?

ಈ) ನಿರ್ದೇಶಕರು ಸೇರಿದಂತೆ ಪೂರ್ಣಾವಧಿ ಸಿಬ್ಬಂದಿಯವರು ಇದ್ದಾರೆಯೇ?

ಉ) ಹೌದಾದಲ್ಲಿ ಸಿಬ್ಬಂದಿ ಮೇಲಿನ ವಾರ್ಷಿಕ ವೆಚ್ಚ ಎಷ್ಟು?

ಊ) ಅನುಷ್ಠಾನಕ್ಕೆ ತರಲಾದ ಕಾರ್ಯಕ್ರಮಗಳ ಸಂಖ್ಯೆ ಎಷ್ಟು?

ಎ) ಕಾರ್ಯಕ್ರಮಗಳ ಮೇಲಿನ ವೆಚ್ಚ ಎಷ್ಟು?

ಐ) ಕ್ಷೇತ್ರ ತರಬೇತಿ ಹೊಂದಿದ ಸಿಬ್ಬಂದಿಯ ಸಂಖ್ಯೆ ಎಷ್ಟು?

ಒ) ಈ ಸಂಸ್ಥೆಯನ್ನು ಈ ಹಿಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಹೆಸರನ್ನು ಇಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ ಮತ್ತು ಆ) ಯೂರೋಪಿಯನ್ ಆರ್ಥಿಕ ಸಮುದಾಯದ ನೆರವಿನಿಂದ ಭಾರತ ಸರ್ಕಾರವು ಕಟ್ಟಡಕ್ಕೆ ರೂ. ೫೫ ಲಕ್ಷ ಹಾಗೂ ಉಪಕರಣಗಳ ಖರೀದಿಗೆ ರೂ. ೨೦ ಲಕ್ಷ ಬಿಡುಗಡೆಮಾಡಿದೆ. ಬಿಡುಗಡೆಯಾದ ಈ ಎಲ್ಲಾ ಹಣವನ್ನು ವೆಚ್ಚಮಾಡಲಾಗಿದೆ.

ಇ) ಸಿಬ್ಬಂದಿ ವ್ಯವಸ್ಥೆ ಈ ಕೆಳಕಂಡಂತಿದೆ

೧)	ನಿರ್ದೇಶಕರು	೧
೨)	ಬೋಧಕರು	೩
೩)	ಆಪರನಿರ್ದೇಶಕರು	೧
೪)	ಅಧೀಕ್ಷಕರು	೧
೫)	ಕ್ಷೇಮ ಪಾಲಕರು	೧